# ಬೇಸಿಗೆಯಲ್ಲಿಯೇ ಏಕೆ ಮಾಗಿ ಉಳುಮೆ?

**ಪಾಲಾಕ್ಷಗೌಡ ಗು. ತಿಪ್ಪನಗೌಡರ ಮತ್ತು ಬಿ. ಅರ್ಚನಾ**

ಕೃಷಿ ವಿಜ್ಞಾನ ಕೇಂದ್ರ, ಹನುಮನಮಟ್ಟಿ – ೫೮೧ ೧೧೫

☎: ೯೪೪೮೪ ೯೫೩೩೮ **ಮಿಂಚಂಚೆ:** kvk_haveri@rediffmail.com

**ಯಾವುದೇ ಫಲವನ್ನು ನಿರೀಕ್ಷಿಸುತ್ತಿರುವಾಗ ಸೂಕ್ತ ಪ್ರಯತ್ನಗಳು ಬೇಕು. ಪ್ರಯತ್ನಗಳನ್ನು ಕೈಕೊಳ್ಳುವ ಮುನ್ನ ಸರಿಯಾದ ಸಿದ್ಧತೆಗಳು ಬೇಕು. ಅದೇ ರೀತಿ ಮುಂಗಾರು ಕೃಷಿಗೂ ಮುನ್ನ ಖರ್ಚಿಲ್ಲದ ಮಾಗಿ ಉಳುಮೆಯನ್ನು ಬೇಸಿಗೆಯಲ್ಲಿ ಮಾಡಬೇಕು. ಆಗ ಮುಂದಿರುವ ಹಂಗಾಮಿನಲ್ಲಿ ಉತ್ತಮ ಫಲ(ಫಸಲು) ಪಡೆಯಬಹುದೆಂಬುದನ್ನು ಸರಳವಾಗಿ ವಿವರಿಸುತ್ತದೆ ಈ ಲೇಖನ.**



**ಮಾ**ಗಿ ಉಳುಮೆಗೆ ಇದು ಸಕಾಲ. ತಡ ಮಾಡಿದರೆ ವ್ಯರ್ಥ ಎನ್ನುತ್ತಾರೆ ಕೃಷಿ ತಜ್ಞರು. ಹೌದು, ರೈತರು ಈಗಾಗಲೇ ಹಿಂಗಾರು ಮತ್ತು ಬೇಸಿಗೆ ಹಂಗಾಮಿನ ಬೆಳೆಗಳನ್ನೆಲ್ಲವನ್ನೂ ಒಕ್ಕಲು ಮಾಡಿ ಕಣಜ ತುಂಬಿಯಾಗಿದೆ. ಮುಂದಿನ ವರ್ಷದ ಬೆಳೆಗಳಿಗೆ ಭೂಮಿಯನ್ನು ಸಿದ್ದಪಡಿಸಿಕೊಳ್ಳಲು ಇದು ಸರಿಯಾದ ಸಮಯ.

ಕೃಷಿ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ರೈತರು ಹೊಸ ಹೊಸ ತಳಿಗಳ ಬೀಜಗಳನ್ನು ಉಪಯೋಗಿಸುತ್ತಾರೆ ಜತೆಗೆ ಸಾಕಷ್ಟು ರಾಸಾಯನಿಕ ಗೊಬ್ಬರ ಸುರಿಯುತ್ತಾರೆ. ಇದಕ್ಕಾಗಿ ಸಾವಿರಾರು ರೂಪಾಯಿಗಳನ್ನೂ ಖರ್ಚು ಮಾಡಿಕೊಳ್ಳುತ್ತಾರೆ. ಎಗ್ಗಿಲ್ಲದೇ ರಾಸಾಯನಿಕ ಗೊಬ್ಬರಗಳನ್ನು ಭೂಮಿಗೆ ಸುರಿಯುತ್ತಾ ಹೋಗುವುದರಿಂದ ಭೂಮಿಯ ಫಲವತ್ತತೆ ಹಾಳಾಗಿ ಹೋಗುತ್ತಿದೆ.

### ಮಣ್ಣಿನ ಸಂರಕ್ಷಣೆ

ಹೀಗೆ ಭೂಮಿಯ ಫಲವತ್ತತೆಗೆ ಹಾಳಾಗಿ ಹೋಗುವುದರಿಂದ ಎಂಥದೇ ಹೊಸ ತಳಿಯ ಬೀಜಗಳನ್ನು ಬಿತ್ತಿದರೂ ಬರುವ ಬೆಳೆ ಅಷ್ಟಕಷ್ಟೇ. ಎಷ್ಟೋ ಸಲ ಬಿತ್ತಿದ ಬೀಜದಷ್ಟೂ ಬೆಳೆ ಬಾರದೇ ರೈತರು ಕಂಗಾಲಾಗುವುದೂ ಇದೆ. ನಮ್ಮಲ್ಲಿ ಮಣ್ಣಿನ ಸಂರಕ್ಷಣೆಗೆ ಅಷ್ಟಾಗಿ ಗಮನವನ್ನೇ ಕೊಡದಿರುವುದರಿಂದಲೇ ಪ್ರತಿ ವರ್ಷ ಫಲವತ್ತಾದ ಮಣ್ಣು ಹಾಳಾಗಿ ಹೋಗುತ್ತಿದೆ. ಇದು ಸಂಶೋಧನೆಯಿಂದಲೂ ದೃಢಪಟ್ಟಿದೆ.

ಫಲವತ್ತಾದ ಮಣ್ಣನ್ನು ಕಾಪಾಡಿಕೊಳ್ಳುವ ವಿಧಾನಗಳಲ್ಲಿ ಮಾಗಿ ಉಳುಮೆಯೂ ಒಂದು. ಆದರೆ ನಮ್ಮ ರೈತರು ಮಾಗಿ ಉಳುಮೆಗೆ ಗಮನವನ್ನೇ ಕೊಡುವುದಿಲ್ಲ. ಇದು ಹೆಚ್ಚಿನ ಖರ್ಚಿಲ್ಲದೇ ಮಾಡಬಹುದಾದದ್ದು ಕೂಡಾ. ಮಾಗಿ ಉಳುಮೆ ಎಂದರೆ, ಬೆಳೆಗಳ ಕಟಾವು ಮುಗಿದ ಮೇಲೆ ಖಾಲಿ ಬಿದ್ದಿರುವ ಹೊಲದಲ್ಲಿ ಎತ್ತಿನ ರಂಟೆ ಅಥವಾ ಕಬ್ಬಿಣದ ರಂಟೆಯಿಂದ ಚೆನ್ನಾಗಿ ಮತ್ತು ಆಳವಾಗಿ ಉಳುಮೆ ಮಾಡುವುದು. ಈಗೀಗ ಟ್ರ್ಯಾಕ್ಟರ್ ಮತ್ತು ರೋಟೋವೇಟರ್‌ಗಳಿಂದಲೂ ಮಾಗಿ ಉಳುಮೆ ಮಾಡಬಹುದು.

### ಉಪಯೋಗಗಳು

ಬೇಸಿಗೆಯಲ್ಲಿಯೇ ಏಕೆ ಮಾಗಿ ಉಳುಮೆ ಮಾಡಬೇಕು? ಇದರಿಂದಾಗುವ ಪ್ರಯೋಜನಗಳೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಕೃಷಿ ತಜ್ಞರ ಉತ್ತರ ಹೀಗಿದೆ.

❖ ಫಲವತ್ತಾದ ಮಣ್ಣು ಮಳೆಯ ನೀರಿಗೆ ಕೊಚ್ಚಿಕೊಂಡು ಹೋಗಿ ಹಳ್ಳ – ಕೊಳ್ಳ ಸೇರಿಕೊಳ್ಳುವುದನ್ನು ಮಾಗಿ

ಉಳುಮೆಯಿಂದ ತಡೆಗಟ್ಟಬಹುದು. ಇದರಿಂದ ಮಣ್ಣಿನ ಸಂರಕ್ಷಣೆ ಮಾಡಿದಂತಾಗುತ್ತದೆ.

❖ ಬೇಸಿಗೆಯಲ್ಲಿ ಮಾಡುವ ಮಾಗಿ ಉಳುಮೆಯಿಂದ ಮುಂಗಾರು ಹಂಗಾಮಿನ ಆರಂಭದಲ್ಲಿ ಬೀಳುವ ಮಳೆಯ ನೀರು ವ್ಯರ್ಥವಾಗಿ ಹರಿದು ಹೋಗದೆ ಸಂಪೂರ್ಣವಾಗಿ ಭೂಮಿಯಲ್ಲಿಯೇ ಇಂಗುವುದರಿಂದ ಭೂಮಿಯಲ್ಲಿ ತಳಹಸಿ ಉಳಿದುಕೊಳ್ಳುತ್ತದೆ. ಕೆಲವೊಮ್ಮೆ ಮಳೆ ಕೈಕೊಟ್ಟರೂ ಸ್ವಲ್ಪ ಕಾಲದವರೆಗಾದರೂ ತಳಹಸಿ ಕಾರಣವಾಗಿ ಬೆಳೆಗಳು ಅಲ್ಪಸ್ವಲ್ಪ ಜೀವ ಹಿಡಿದುಕೊಂಡಿರುತ್ತವೆ. ಅಲ್ಲದೇ ಅಂತರ್ಜಲದ ಮಟ್ಟವೂ ಹೆಚ್ಚುತ್ತದೆ. ಬಾವಿಗಳಲ್ಲೂ ನೀರಿನ ಕೊರತೆಯಾಗುವುದಿಲ್ಲ.

❖ ಮಾಗಿ ಉಳುಮೆಯಿಂದಾಗಿ ಮೇಲಿನ ಫಲವತ್ತಾದ ಮಣ್ಣು ಕೆಳಕ್ಕೆ, ಕೆಳಗಿನ ಮಣ್ಣು ಮೇಲಕ್ಕೆ ಬರುತ್ತದೆ. ಇಡೀ ಬೇಸಿಗೆಯಲ್ಲಿ ಈ ಮಣ್ಣು ಬಿಸಿಲಿಗೆ ಚೆನ್ನಾಗಿ ಕಾದು ಮಳೆ ಬಿದ್ದಾಗ ಹದಗೊಳ್ಳುತ್ತದೆ.

❖ ಬೆಳೆಗಳಿಗೆ ಹಾನಿಯನ್ನುಂಟು ಮಾಡುವ ಭೂಮಿಯ ಒಳಗಿನ ಕ್ರಿಮಿ–ಕೀಟಗಳು ಮಾಗಿ ಉಳುಮೆಯಿಂದ ಮೇಲ್ಭಾಗಕ್ಕೆ ಬರುತ್ತವೆ. ಆಗ ಪಕ್ಷಿಗಳು ಈ ಕ್ರಿಮಿ–ಕೀಟಗಳನ್ನು ತಿನ್ನುತ್ತವೆ. ಇಲ್ಲವೇ ಬಿಸಿಲಿನ ಧಗೆಗೆ ಸತ್ತು ಹೋಗುತ್ತವೆ. ಇದರಿಂದ ಮುಂದಿನ ಬೆಳೆಗಳಿಗೆ ತಗುಲಬಹುದಾದ ಕೀಟಗಳ ನಿಯಂತ್ರಣ ಗಣನೀಯವಾಗಿ ತಗ್ಗುತ್ತದೆ.



❖ ಬೆಳೆ ಕಟಾವಿನ ನಂತರ ಉಳಿದುಕೊಳ್ಳುವ ಕೂಳೆ, ಬೇರು–ಕಾಂಡ, ಕಸಕಡ್ಡಿಗಳು ಭೂಮಿಯ ಆಳಕ್ಕೆ ಹೋಗಿ ಕಳಿತ ಗೊಬ್ಬರವಾಗುತ್ತದೆ.

❖ ಪ್ರಾಣಿ ಹಾಗೂ ಸಸ್ಯಗಳಂತೆಯೇ ಮಣ್ಣಿಗೂ ಕೂಡಾ ಗಾಳಿಯ ಅವಶ್ಯಕತೆ ಇದೆ. ಏಕೆಂದರೆ ಒಂದರ್ಥದಲ್ಲಿ ಮಣ್ಣೂ ಸಹಿತ ಉಸಿರಾಡುತ್ತದೆ! ಆಳವಾದ ಉಳುಮೆ ಮಾಡುವುದರಿಂದ ಭೂಮಿಯಲ್ಲಿ ಹವೆಯಾಡುತ್ತದೆ. ಇದರಿಂದ ಮುಂದಿನ ಬೆಳೆಗಳಿಗೆ ಹೆಚ್ಚು ಅನುಕೂಲವಾಗುತ್ತದೆ.

ಬೇಸಿಗೆಯಲ್ಲಿ ಕೈಕೊಳ್ಳುವ ಮಾಗಿ ಉಳುಮೆಯಿಂದ ಇಷ್ಟೆಲ್ಲಾ ಅನುಕೂಲಗಳಿರುವಾಗ ತಡ ಯಾಕೆ? ಈಗಲೇ ಮಾಗಿ ಉಳುಮೆ ಆರಂಭಿಸಿ.

****


**ರೈತರಿಗೆ ತುರ್ತು ಸಹಾಯವಾಣಿ (ಉಚಿತ ಕರೆ)**



**ಕೃಷಿ ಉತ್ಪನ್ನಗಳ ಬೆಲೆ**
**18000-425-1552**

**ಕೃಷಿ ಸಮಸ್ಯೆ**
**1800-425-3553**

**ಉದ್ಯೋಗ ಖಾತರಿ ಯೋಜನೆ ಸಂಬಂಧ**
**1800-425-8666**

**ಕಾಡಂಚಿನ ಪ್ರಾಣಿಗಳ ಹಾವಳಿ ತಡೆಗೆ ಅರಣ್ಯ ಇಲಾಖೆ**
**1800-425-1314**